ವಿಷಯ : ಬೆಂಗಳೂರು ಮಹಾನಗರಪ್ರಾಧಿಕಾರದ ಚಟುವಟಿಕೆಗಳು.

ಚುಕ್ಕೆ ಗುರುತಿಲ್ಲದೆ ಪ್ರಶ್ನೆ ಸಂಖ್ಯೆ : 332 (417)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ( ಔರಾದ್) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರಾಭಿವೃದ್ಧಿ ಪ್ರಾಧಿಕಾರವು ಎಂದು ಅಸ್ತಿತ್ವಕ್ಕೆ ಬಂದಿತು, ಇದರ ಕಾರ್ಯ ಚಟುವಟಿಕೆಗಳೇನು?

ಆ) ಕಳೆದ ಎರಡು ವರ್ಷಗಳಿಂದ ಈ ಪ್ರಾಧಿಕಾರದ ಮೂಲಕ ಬೆಂಗಳೂರು ಮಹಾನಗರದ ಅಭಿವೃದ್ಧಿಗಾಗಿ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ಅವಧಿಯಲ್ಲಿ ಖರ್ಚು ಮಾಡಿದ ಹಣದ ಮೊತ್ತವೆಷ್ಟು?

ಇ) ಇದಕ್ಕಾಗಿ ಕೇಂದ್ರ ಸರ್ಕಾರದಿಂದ ನೆರವೇನಾದರೂ ಬಂದಿದೆಯೇ?

ಈ) ಬೆಂಗಳೂರು ಮೆಗಾಸಿಟಿ ಯೋಜನೆಯಲ್ಲಿ ಈ ಪ್ರಾಧಿಕಾರದ ಪಾತ್ರವೇನು?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಬೆಂಗಳೂರು ನಗರಾಭಿವೃದ್ಧಿ ಸಚಿವರು) :

ಅ) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು ಸರ್ಕಾರವು ಆಜ್ಞೆ ಕ್ರಮಾಂಕ ಹೆಚ್‌ಯುಡಿ 16 ಬಿಎಂಆರ್ 87 ದಿನಾಂಕ 19-12-87ರಲ್ಲಿ ರಚಿಸಿತು.

ಈ ಪ್ರಾಧಿಕಾರದ ಕಾರ್ಯಚಟುವಟಿಕೆಗಳು ಈ ಕೆಳಕಂಡಂತಿವೆ :

1) ಬೆಂಗಳೂರು ಮಹಾನಗರ ಪ್ರದೇಶವನ್ನು ಮೋಜಣಿ ಮಾಡಿ ಆ ಬಗ್ಗೆ ವರದಿ ತಯಾರಿಸುವದು.

2) ಬೆಂಗಳೂರು ಮಹಾನಗರ ಪ್ರದೇಶಕ್ಕೆ ಸ್ಟ್ರಕ್ಚರ್ ಪ್ಲಾನ್ ತಯಾರಿಸುವುದು.

3) ಸ್ಟ್ರಕ್ಚರ್ ಪ್ಲಾನ್ ನಲ್ಲಿ ಸೂಚಿಸಿರುವಂತೆ ಪ್ರಸ್ತಾವನೆಗಳನ್ನು ಕಾರ್ಯಗತಗೊಳಿಸುವುದು.

4) ಸ್ಟ್ರಕ್ಚರ್ ಪ್ಲಾನ್‌ನ್ನು ಕಾರ್ಯಗತಗೊಳಿಸಲು ಎಷ್ಟು ಯೋಜನೆಗಳು ಬೇಕಾಗಿದೆಯೋ ಅಷ್ಟು ಯೋಜನೆಗಳನ್ನು ರೂಪಿಸುವುದು.

5) ನಗರ ಯೋಜನಾ ಸ್ಕೀಂಗಳನ್ನು ಪಡೆದು ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ಸಮನ್ವಯತೆಯವನ್ನು ಏರ್ಪಡಿಸುವುದು ಮತ್ತು ಸದರೀ ಸ್ಕೀಂಗಳ ಪ್ರಕಾರ ಬೆಂಗಳೂರು ಮಹಾನಗರ ಪ್ರದೇಶವನ್ನು ಅಭಿವೃದ್ಧಿಗೊಳಿಸುವುದು.

6) ಬೆಂಗಳೂರು ಮಹಾನಗರ ಪ್ರದೇಶದಲ್ಲಿನ ಯಾವುದೇ ಯೋಜನೆಗಳಿಗೆ ಹಣಕಾಸು ವ್ಯವಸ್ಥೆ ಮಾಡುವುದು ಮತ್ತು ಈ ಪ್ರದೇಶದಲ್ಲಿನ ಸ್ಥಳೀಯ ಪ್ರಾಧಿಕಾರಿಗಳಿಗೆ ಸದರೀ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಹಾಯ ಮಾಡುವುದು.

7) ಸರ್ಕಾರವು ವಹಿಸಿದ ಇತರೆ ಕೆಲಸಗಳನ್ನು ಮಾಡುವುದು ಅಥವಾ ಪ್ರಾಧಿಕಾರದ ರಚನೆಯ ಉದ್ದೇಶಿತ ಕಾರ್ಯಗಳಿಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುವುದು.

8) ಯಾವುದೇ ಅಭಿವೃದ್ಧಿ ಯೋಜನೆ ಅಥವಾ ನಗರ ಯೋಜನೆ ಸ್ಕೀಂಗಳನ್ನು ಕಾರ್ಯಗತಗೊಳಿಸಲು ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ವಹಿಸುವುದು.

9) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ,ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಕರ್ನಾಟಕ ಕೈಗಾರಿಕಾ ಪ್ರದೇಶಾಬಿವೃದ್ಧಿ ಮಂಡಳಿ ಹಾಗೂ ಬೆಂಗಳೂರು ನಗರ ಪ್ರದೇಶದಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಪಟ್ಟ ಸಂಸ್ಥೆಗಳ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸುವುದು ಆಗಿರುತ್ತದೆ. ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆಗಳ ಕಾಯಿದೆ 1961ರ ವಿಧಿ (81-ಸಿ) ಪ್ರಕಾರ ಬೆಂಗಳೂರು ಮಹಾನಗರ ಪ್ರದೇಶದಲ್ಲಿನ ನಗರ ಯೋಜನಾ ಪ್ರಾಧಿಕಾರಗಳು ತಯಾರಿಸುವ ಸ್ಥೂಲಾಭಿವೃದ್ಧಿ ಯೋಜನೆ ಮತ್ತು ವ್ಯಾಪಕಾಭಿವೃದ್ಧಿ ಯೋಜನೆಗಳನ್ನು ಬೆಂಗಳೂರು ಮಹಾನಗರದ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮೂಲಕ ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವುದಾಗಿರುತ್ತದೆ.

| ಆ)ಯೋಜನೆಗಳು | ಖರ್ಚು ಮಾಡಿದ ಹಣ |
|---|---|
| 1) ಬೆಂಗಳೂರು ನಗರಪಾಲಿಕೆ ಯೋಜನೆ | : ಇಲ್ಲ. |
| 2) ಬೆಂಗಳೂರು ಮೆಗಾಸಿಟಿ ಯೋಜನೆ ವರದಿ | : 2.305 ಲಕ್ಷ ರೂ.ಗಳು |
| 3) ಕರ್ನಾಟಕ ಮೂಲ ಸೌಕರ್ಯಗಳ ಅಭಿವೃದ್ಧಿ ಯೋಜನೆ ವರದಿ | : 1.26 ಲಕ್ಷ ರೂ.ಗಳು |
| 4) ವೃತ್ತ ರೈಲ್ವೆ ಯೋಜನೆ ವರದಿ | : 1.8 ಲಕ್ಷ ರೂ.ಗಳು |
| ಇ) 1) ಬೆಂಗಳೂರು ನಗರ ಸಾರಿಗೆ ಯೋಜನೆ | : ಇಲ್ಲ |
| 2) ಬೆಂಗಳೂರು ಮೆಗಾ ಸಿಟಿ ಯೋಜನೆ ವರದಿ | : 10 ಲಕ್ಷ ರೂ.ಗಳು |
| 3) ವೃತ್ತ ರೈಲ್ವೆ ಯೋಜನೆ ವರದಿ | : ಇಲ್ಲ. |

ಈ) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ಮೆಗಾಸಿಟಿ ಯೋಜನೆಯಡಿಯಲ್ಲಿ, ವಿವಿಧ ಇಲಾಖೆಗಳು ತಯಾರಿಸಿದ ಯೋಜನೆಗಳನ್ನು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳುಹಿಸಿಕೊಡುತ್ತದೆ. ಮಂಜೂರಾದ ಯೋಜನೆಗಳಿಗೆ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಸರ್ಕಾರ ಮತ್ತು ಹಣಕಾಸು ಸಂಸ್ಥೆಗಳಿಂದ ಈ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಹಣ ಪಡೆಯುವ ದಿಶೆಯಲ್ಲಿ ಒಂದು ನೋಡಲ್ ಏಜೆನ್ಸಿಯಾಗಿ ಕಾರ್ಯ ನಿರ್ವಹಿಸುತ್ತದೆ. ಕೆ.ಎಂ.ಸಿ. ಕಾಯ್ದೆ 1976ನ್ನು ಸಂವಿಧಾನದ (74ನೇ ತಿದ್ದುಪಡಿ) ಕಾಯ್ದೆ 1992ರನ್ವಯ ತಿದ್ದುಪಡಿ ಮಾಡಿರುವುದರಿಂದ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು ರದ್ದುಗೊಳಿಸಿ ಬೆಂಗಳೂರು ಮಹಾನಗರ ಯೋಜನಾ ಸಮಿತಿಯನ್ನು ರಚಿಸಲಾಗುತ್ತದೆ. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು ರದ್ದಾದ ಬಳಿಕ ಮೆಗಾಸಿಟಿ ಯೋಜನೆಗಳು ಕರ್ನಾಟಕ ನಗರ ಮೂಲ ಸೌಲಭ್ಯಗಳ ಅಭಿವೃದ್ಧಿ ಹಾಗೂ ಹಣಕಾಸು ಸಂಸ್ಥೆಯ ಮತಿಯಿಂದ ಕಾರ್ಯಗತಗೊಳಿಸಲಾಗುವುದು.